

بِسْمِ اللّٰهِ الرَّحْمٰنِ الرَّحِيمِ

# ಕೆನಡದ ರೆಜಾಯಿನದಲ್ಲಿ ಹೊಸ ಮಸ್‌ಜಿದ್

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಕೆನಡದ ಟೊರೋಂಟೋದ ರೆಜಾಯಿನದ ಮಹಮೂದ್ ಮಸ್ಜಿದ್‌ನಿಂದ **04–11–2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ತಿಲಾವತ್ ಮಾಡಿದರು:*

إِنَّمَا يَعْمُرُ مَسَاجِدَ اللّٰهِ مَنْ آمَنَ بِاللّٰهِ وَالْيَوْمِ الْآخِرِ وَأَقَامَ الصَّلَاةَ وَآتَى الزَّكَاةَ وَلَمْ يَخْشَ إِلَّا اللّٰهَ فَعَسَى أُولَئِكَ أَنْ يَكُونُوا مِنَ الْمُهْتَدِينَ

**ಇನ್ನಮಾ ಯಅ್‌ಮುರು ಮಸಾಜಿದಲ್ಲಾಹಿ ಮನ್ ಆಮನ ಬಿಲ್ಲಾಹಿ ವಲ್‌ಯೌಮಿಲ್ ಆಖಿರಿ ವ ಅಖಾಮಸ್ಸಲಾತ ವ ಆತಝ್ಝಕಾತ ವ ಲಮ್ ಯಖ್‌ಶ ಇಲ್ಲಲ್ಲಾಹ ಫಅಸಾ ಉಲಾಯಿಕ ಅನ್ ಯಕೂನೂ ಮಿನಲ್ ಮುಹ್‌ತದೀನ್.**

ಯಾರು ಅಲ್ಲಾಹನಲ್ಲೂ ಅಂತ್ಯದಿನದ ಬಗ್ಗೆಯೂ ವಿಶ್ವಾಸವಿಡುತ್ತಾರೋ, ನಮಾಝುನ್ನು ನಿಷ್ಠೆಯಿಂದ ನಿರ್ವಹಿಸುತ್ತಾರೋ, ಝಕಾತ್ ನೀಡುತ್ತಾರೋ, ಅಲ್ಲಾಹನಿಗೆ ಹೊರತು (ಬೇರೆ ಯಾರಿಗೂ) ಭಯಪಡುವುದಿಲ್ಲವೋ ಅವರು ಮಾತ್ರ ಅಲ್ಲಾಹನ ಮಸ್ಜಿದ್‌ಗಳನ್ನು ಪರಿಪಾಲಿಸುವ ಹಕ್ಕುದಾರರು. ಅಂಥವರೇ ಮಾರ್ಗದರ್ಶನ ಹೊಂದಬಲ್ಲರು. (9:18).

ಅಲ್‌ಹಮ್‌ದುಲಿಲ್ಲಾಹ್– ರಜಾಯಿನದ ಅಹ್ಮದಿಯಾ ಜಮಾಅತಿನ ಜನರಿಗೂ ಅಲ್ಲಾಹನು ಮಸ್‌ಜಿದ್ ನಿರ್ಮಿಸುವ ಭಾಗ್ಯ ನೀಡಿದನು. ಮಾಶಾಅಲ್ಲಾಹ್– ಬಹಳ ಸುಂದರ ಮಸ್‌ಜಿದ್ ನಿರ್ಮಿಸಲಾಗಿದೆ. ಇಲ್ಲಿರುವ ಜಮಾಅತಿನ ಸದಸ್ಯರ ಸಂಖ್ಯೆ ಸುತ್ತುಮುತ್ತಲೂ ಇರುವ ಪ್ರದೇಶಗಳಲ್ಲಿರುವವವರನ್ನು ಸೇರಿಸಿ ಅಂದಾಜು 160 ಇದೆ. ಮಸ್‌ಜಿದ್‌ನ ಹಾಲ್‌ಗಳಲ್ಲಿ ನಾಲ್ಕುನೂರು ಜನರು ನಮಾಝ್ ಮಾಡಬಹುದಾಗಿದೆ. ಆವಶ್ಯವಿದ್ದರೆ ಸಾಮಾನ್ಯ ಉಪಯೋಗದ ಸ್ಥಳದಲ್ಲಿ ಸಹ ಇನ್ನೂ ಒಂದು ನೂರು ಜನರು ನಮಾಝ್ ಮಾಡುವ ಅನುಕೂಲತೆ ಲಭಿಸಬಹುದು. ಈ ಮಸ್‌ಜಿದ್ ನಿರ್ಮಾಣದ ಖರ್ಚಿನ ಹೊಣೆಗಾರಿಕೆಯನ್ನು ಇಲ್ಲಿನ ಅಹ್ಮದಿಯರೇ ನಿರ್ವಹಿಸಿದ್ದಾರೆ ಅಥವಾ ವಾಗ್ದಾನ ಮಾಡಿದ್ದಾರೆ ಎಂದು ನನಗೆ ತಿಳಿಸಲಾಗಿದೆ. ಖರ್ಚಾದ ನಗದು ಹಣದಲ್ಲಿ ಮೂರನೆಯ ಒಂದು ಭಾಗವನ್ನು ಇಬ್ಬರು ವ್ಯಕ್ತಿಗಳು ನೀಡಿದ್ದಾರೆ. ಅವರಲ್ಲೊಬ್ಬರು ನಮ್ಮ ಡಾಕ್ಟರ್ ಶಮ್ಸುಲ್ ಹಖ್ ಶಹೀದರ ವಿಧವೆಯಾಗಿದ್ದಾರೆ. ನಗದು ಹಣ ಎಂದು ನಾನು ಹೇಳಿದುದು ಏಕೆಂದರೆ ಮಸ್‌ಜಿದ್ ನಿರ್ಮಾಣವನ್ನು ಪ್ರಾರಂಭಿಸುವ ಹಂತದಲ್ಲಿ ಕಂಟ್ರಾಕ್ಟರ್‌ನೊಂದಿಗೆ ವಿಚಾರಿಸಿದಾಗ ಕನಿಷ್ಠ ಟೆಂಡರ್ ಸಂಖ್ಯೆ 2.8 ಮಿಲಿಯನ್ ಡಾಲರ್ ಆಗಿತ್ತು. ಬೇರೆ ಖರ್ಚು ಸೇರಿ ಒಟ್ಟಿಗೆ 3.5 ಮಿಲಿಯನ್ ಡಾಲರ್ ತನಕ ಖರ್ಚು ಮಾಡಬೇಕಾಗುತ್ತಿತ್ತು. ಆದರೆ ವಾಸ್ತವಿಕವಾಗಿ ಈ ಮಸ್‌ಜಿದ್ ನಿರ್ಮಾಣಕ್ಕೆ ಒಟ್ಟು ಖರ್ಚಾದುದು 1.6 ಮಿಲಿಯನ್ ಡಾಲರ್ ಮಾತ್ರವಾಗಿದೆ. ಒಬ್ಬ ಲೌಕಿಕ ಮನುಷ್ಯನು ಈ ಮಾತನ್ನು ಆಲಿಸಿ ಇದು ಹೇಗೆ ಸಾಧ್ಯ ಎಂದು ಹೇಳಬಹುದು. ಕಂಟ್ರಾಕ್ಟರ್‌ಗಳು ಸೂಚಿಸಿದ ಕನಿಷ್ಠ ಸಂಖ್ಯೆಯ ಅರ್ಧಾಂಶಕ್ಕಿಂತ ಕಡಿಮೆ ಖರ್ಚಿನಲ್ಲಿ ಮಸ್‌ಜಿದ್ ನಿರ್ಮಾಣವಾಯಿತು. ಖಂಡಿತವಾಗಿಯೂ ಒಬ್ಬ ಲೌಕಿಕವಾದಿ ಇದನ್ನು ಅಂದಾಜು ಮಾಡಲಾರ. ಏಕೆಂದರೆ ತ್ಯಾಗ ಎಂದರೆ ಏನೆಂದು ಅವನಿಗೆ ತಿಳಿದಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತ್ ತ್ಯಾಗದ ಯಾವ ಮಟ್ಟವನ್ನು ಸ್ಥಾಪಿಸಿದೆ ಎಂದು ಅವನಿಗೆ ತಿಳಿದಿಲ್ಲ. ಜೀವ, ಸಂಪತ್ತು ಮತ್ತು ಸಮಯದ ಬಲಿದಾನ ಮಾಡುವ ಉದಾಹರಣೆಗಳು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತಿನಲ್ಲಿ ಮಾತ್ರ ಲಭಿಸುತ್ತವೆ. ಪ್ರತಿಯೊಂದು ಸ್ಥಳದಲ್ಲಿ ಅಹ್ಮದಿಯಾ ಜಮಾಅತಿನ ಮನೋಭಾವ ಇದೇ ರೀತಿ ಇದೆ. ಪಾಕಿಸ್ಥಾನದ ಅಹ್ಮದಿಯರು ಇದೇ ರೀತಿ ಜೀವ ಮತ್ತು ಸಂಪತ್ತು ತ್ಯಾಗ ಮಾಡುತ್ತಾರೆ. ಇದೇ ರೀತಿ ಆಫ್ರಿಕದ ಅಹ್ಮದಿಯರು ಸಹ ಅವರಲ್ಲಿ ಸಂಪತ್ತು ಇಲ್ಲದಿದ್ದರೆ ಅವರು ಸಮಯದ ಬಲಿದಾನ ಮಾಡುತ್ತಾರೆ. ಮತ್ತು ತಮ್ಮಲ್ಲಿ ಏನಿದೆಯೋ ಅದನ್ನು ಕೊಟ್ಟು ಜಮಾಅತಿನ ಕೆಲಸಕ್ಕೋಸ್ಕರ ತಮ್ಮನ್ನು ಮುಂದೊಡ್ಡುತ್ತಾರೆ. ಇಂಡೋನೇಶಿಯಾದ ಅಹ್ಮದಿಯಾಗಲಿ, ಯುರೋಪಿನಲ್ಲಿಯ ಅಹ್ಮದಿಯಾಗಲಿ, ಇಲ್ಲಿ ಕೆನಡದಲ್ಲಿರುವ ಅಹ್ಮದಿಯಾಗಲಿ ಅಥವಾ ಲೋಕದ ಯಾವುದೇ ಪ್ರದೇಶದಲ್ಲಿರುವ ಅಹ್ಮದಿಯಾಗಲಿ ಅವರಿಗೆಲ್ಲಾ ಅಲ್ಲಾಹನು ಬಲಿದಾನ ನೀಡುವ ಭಾಗ್ಯ ನೀಡುತ್ತಾನೆ. ಏಕೆಂದರೆ ಅವರು ಅಲ್ಲಾಹನ ಸಂಪ್ರೀತಿ ಗಳಿಸುವುದನ್ನು ತಮ್ಮ ಜೀವಿತದ ಉದ್ದೇಶಲಕ್ಷ್ಯವನ್ನಾಗಿ ಮಾಡಿದ್ದಾರೆ. ಈ ಮಸ್‌ಜಿದ್ ನಿರ್ಮಾಣದಲ್ಲಿ ಜಮಾಅತಿನ ಸಂಪತ್ತಿನ ಅರ್ಧಾಂಶಕ್ಕಿಂತ ಹೆಚ್ಚಿನ ಹಣ ಉಳಿತಾಯವಾಗಿದೆ. ಸೆಸ್ಕಾಟೂನ್ ನಗರದ ಮೂವರು ಸಹೋದರರು ಸ್ವಯಂ ಸೇವಕರಾಗಿ ಕೆಲಸ ಮಾಡಿದುದರಿಂದ ಈ ರೀತಿ ಉಳಿತಾಯವಾಗುವಂತೆ ಆಗಿದೆ ಎಂದು ನನಗೆ ತಿಳಿಸಲಾಗಿದೆ.

ಅದೇ ರೀತಿ ಬೇರೆ ಸ್ವಯಂ ಸೇವಕರು ಸಹ ಕೆಲಸ ಮಾಡಿದ್ದಾರೆ. ಕಂಟ್ರಾಕ್ಟರ್‌ಗಳಾದ ಈ ಮೂರು ಸಹೋದರರ ಸಹಾಯಕ್ಕೆ ನಾಲ್ಕನೆಯ ಒಬ್ಬ ಕಂಟ್ರಾಕ್ಟರ್ ಸಹ ಸಹಾಯ ಮಾಡಿದರು. ಅವರನ್ನು ಪ್ರಾಯಶಃ ಇದೇ ಕೆಲಸಕ್ಕೋಸ್ಕರ ಅಲ್ಲಾಹನು ಕಳುಹಿಸಿದ್ದನು. ಅವರ ಕೆಲಸ ಟೊರೊಂಟೋದಲ್ಲಿ ಮುಗಿದಾಗ ಅವರು ಇಲ್ಲಿಗೆ ಬಂದರು. ಇವರೆಲ್ಲರೂ ಸೇರಿ ಈ ಕೆಲಸ ಮಾಡಿದರು. ಬೇರೆ ಸ್ವಯಂ ಸೇವಕರೂ ಇದ್ದರು. ರೆಜಾಯಿನ, ಸೆಸ್ಕಾಟೋನ್, ಕ್ಯಾಲಿಗೆರಿ, ಎಂಡ್‌ಮೆಂಟನ್, ಟೊರೊಂಟೋದಿಂದ ಸ್ವಯಂ ಸೇವಕರು ಆಗಮಿಸಿದ್ದರು. ಅವರಲ್ಲಿ ಖುದ್ದಾಮ್ ಮತ್ತು ಅನ್ಸಾರ್

ಇದ್ದರು. ತಂತ್ರಜ್ಞಾನದ ಕೆಲಸ ಮಾಡುವ ಪರಿಣಿತರ ಆವಶ್ಯಕತೆ ಇರುವ ಕೆಲಸದ ಹೊರತು ಉಳಿದ ಎಲ್ಲ ಕೆಲಸಗಳನ್ನು ಈ ಕಂಟ್ರಾಕ್ಟರ್‌ಗಳು ಮತ್ತು ಸ್ವಯಂ ಸೇವಕರು ಮಾಡಿದರು. ಲೌಕಿಕರಾದ ಕಂಟ್ರಾಕ್ಟರ್‌ಗಳು ಈ ರೀತಿ ಯೋಚಿಸಲಾರರು. ಆದರೆ ಈ ಕಂಟ್ರಾಕ್ಟರ್‌ಗಳು ತಮ್ಮ ಹಣ ಮತ್ತು ಸಮಯದ ಬಗ್ಗೆ ಲಕ್ಷ್ಯ ನೀಡಲಿಲ್ಲ. ಅದೇ ರೀತಿ ಲಜ್‌ನದವರು ಸಹ ಈ ಸ್ವಯಂ ಸೇವಕರಿಗೆ ಊಟದ ವ್ಯವಸ್ಥೆ ಮಾಡಿದರು. ಅವರು ಸಾಂಪತ್ತಿಕ ಬಲಿದಾನದೊಂದಿಗೆ ಈ ರೀತಿ ಸೇವೆ ಸಹ ಮಾಡಿ ಮಸ್‌ಜಿದ್ ನಿರ್ಮಾಣದಲ್ಲಿ ಭಾಗವಹಿಸಿದರು. ಈ ಮಸ್‌ಜಿದ್ ನಿರ್ಮಾಣಕ್ಕೆ ಅಂದಾಜು ನಲ್ವತ್ತೊಂದುವರೆ ಸಾವಿರ ಗಂಟೆಗಳಷ್ಟು ಕಾಲ ಸ್ವಯಂ ಸೇವಕರು ಸ್ವಯಂ ಸೇವೆ ಅರ್ಪಿಸಿದರು. ಈ ಮನೋಭಾವ ಅಲ್ಲಾಹನ ಅನುಗ್ರಹದಿಂದ ಅಹ್ಮದಿಯರಲ್ಲಿ, ನಾನು ಹಿಂದೆ ಹೇಳಿದ ಹಾಗೆ ಪ್ರತಿಯೊಂದು ಸ್ಥಳದಲ್ಲಿ ಅಹ್ಮದಿಯರಲ್ಲಿ ಕಾಣಿಸುತ್ತದೆ. ಒಂದು ಕಡೆ ಕೆಲವು ಮುಸ್ಲಿಮರು ಲೋಕದಲ್ಲಿ ಅಶಾಂತಿ ಹಬ್ಬಿಸಲು ನಿರತರಾಗಿರುವಾಗ, ಇನ್ನೊಂದು ಕಡೆ ಅಭಿವೃದ್ಧಿ ಹೊಂದಿದ ಮತ್ತು ಲೌಕಿಕ ಲಾಭಕ್ಕೆ ಆದ್ಯತೆ ನೀಡುವ ದೇಶಗಳಲ್ಲಿ ವಾಸಿಸಲು ಅಹ್ಮದಿಯರು ಅಲ್ಲಾಹನ ಭವನ ನಿರ್ಮಿಸಲು ತಮ್ಮ ಸಂಪತ್ತು ಮತ್ತು ಸಮಯ ನೀಡುತ್ತಿದ್ದಾರೆ. ಇದು ಏಕೆಂದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿರುವರು ಯಾರು ಅಲ್ಲಾಹನ ಭವನ ನಿರ್ಮಿಸುತ್ತಾನೋ ಅವನು ಸ್ವರ್ಗದಲ್ಲಿ ತನ್ನ ಮನೆ ನಿರ್ಮಿಸುತ್ತಾನೆ ಎಂದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧರಾದ ದಾಸರಾಗಿರುವ ಈ ಕಾಲದ ಇಮಾಮರು ತನ್ನನ್ನು ನಂಬುವವರೊಂದಿಗೆ ಹೇಳಿದ್ದಾರೆ– ನೀವು ಇಸ್ಲಾಮಿನ ಸುಂದರ ಸಂದೇಶವನ್ನು ಲೋಕದಲ್ಲಿ ಹರಡಲು ಮತ್ತು ಇಸ್ಲಾಮಿನ ಯಥಾರ್ಥ ಸುಂದರ ಚಿತ್ರವನ್ನು ನೀಡಲು ಮಸ್‌ಜಿದ್‌ಗಳನ್ನು ನಿರ್ಮಿಸಿರಿ ಎಂದು.

ಮಸ್‌ಜಿದ್ ನಿರ್ಮಾಣದ ಮಹತ್ವವನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಒಂದು ಕಡೆ ಹೀಗೆ ಹೇಳಿದರು: ಈಗ ನಮ್ಮ ಜಮಾಅತಿಗೆ ಮಸ್‌ಜಿದ್ ನಿರ್ಮಾಣದ ಬಹಳ ಆವಶ್ಯಕತೆ ಇದೆ. ಮಸ್‌ಜಿದ್ ಅಲ್ಲಾಹನ ಮನೆಯಾಗಿದೆ. ಯಾವುದಾದರೂ ಗ್ರಾಮ ಅಥವಾ ನಗರದಲ್ಲಿ ನಮ್ಮ ಮಸ್‌ಜಿದ್ ನಿರ್ಮಾಣವಾದರೆ ನೀವು ತಿಳಿದುಕೊಳ್ಳಿರಿ ಜಮಾಅತಿನ ಅಭಿವೃದ್ಧಿಯ ಅಸ್ತಿಭಾರವನ್ನು ಹಾಕಲಾಗಿದೆ ಎಂದು. ಮುಸ್ಲಿಮರು ಕಡಿಮೆ ಸಂಖ್ಯೆಯಲ್ಲಿ ಇರುವ ಅಥವಾ ತೀರಾ ಇಲ್ಲದ ಗ್ರಾಮ ಅಥವಾ ನಗರವಿದ್ದರೆ ಅಲ್ಲಿ ಇಸ್ಲಾಮ್ ಅಭಿವೃದ್ಧಿ ಹೊಂದಬೇಕಾಗಿದ್ದರೆ ಅಲ್ಲಿ ಒಂದು ಮಸ್‌ಜಿದ್ ನಿರ್ಮಿಸಬೇಕು. ಆಗ ಅಲ್ಲಾಹನು ಮುಸ್ಲಿಮರನ್ನು ಅಲ್ಲಿಗೆ ಎಳೆದುಕೊಂಡು ಬರುವನು. ಆದರೆ ಶರತ್ತೇನೆಂದರೆ ಮಸ್‌ಜಿದ್ ನಿರ್ಮಾಣದ ಸಂಕಲ್ಪ ನಿಷ್ಠೆಯಿಂದ ಭರಿತವಾಗಿರಬೇಕು. ಮಸ್‌ಜಿದ್ ನಿರ್ಮಿಸುವ ಸಂಕಲ್ಪ ಒಳ್ಳೆಯದಾಗಿರಬೇಕು. ಅದನ್ನು ಕೇವಲ ಅಲ್ಲಾಹನಿಗೋಸ್ಕರ ನಿರ್ಮಿಸಬೇಕು. ಸ್ವಾರ್ಥ ಉದ್ದೇಶಗಳು ಮತ್ತು ಬೇರೆ ಯಾವುದೇ ದುರುದ್ದೇಶ ಇರಬಾರದು. ಆಗ ಅಲ್ಲಾಹನು ಅನುಗ್ರಹ ನೀಡುವನು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆ ಇಚ್ಛೆಯನ್ನು ಈಡೇರಿಸಲು ನಾವು ಪ್ರಯತ್ನಿಸಬೇಕು. ಅದರೊಂದಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಿವರಿಸಿದ ಶರತ್ತನ್ನೂ ದೃಷ್ಟಿಯಲ್ಲಿರಿಸಬೇಕು. ಅದರ ಬಗ್ಗೆ ನಿಷ್ಠೆ ಇರಬೇಕು. ತಾತ್ಕಾಲಿಕ ಉತ್ಸಾಹವಿದ್ದರೆ ಸಾಲದು. ಸುಂದರ ಮಸ್‌ಜಿದ್ ನಿರ್ಮಾಣದ ಉದ್ದೇಶ ಮಾತ್ರ ಹೊಂದಿದರೆ ಸಾಕಾಗಲಾರದು. ಅದರೊಂದಿಗೆ ಮಸ್‌ಜಿದ್ ನಿರ್ಮಾಣದ ಉದ್ದೇಶ ಲಕ್ಷ್ಯಗಳನ್ನು ಈಡೇರಿಸುವ ಆವಶ್ಯಕತೆ ಸಹ ಇದೆ. ಕೇವಲ ಹೆಸರು ಪಡೆಯಲು ಮಸ್‌ಜಿದ್ ನಿರ್ಮಿಸಬಾರದು. ಇಷ್ಟು ಹಣ ಖರ್ಚು ಮಾಡಲಾಗಿದೆ, ಇಷ್ಟು ಗಂಟೆಗಳ ಕಾಲ ಸ್ವಯಂ ಸೇವೆಗೆ ವಿನಿಯೋಗಿಸಲಾಗಿದೆ ಎಂದೆಲ್ಲಾ ಹೇಳಲು, ಅಥವಾ ಸ್ಪರ್ಧೆಯ ರೂಪದಲ್ಲಿ ಅದು ಆಗಬಾರದು. ಕೇವಲ ಅಲ್ಲಾಹನ ತೃಪ್ತಿಗಳಿಸಲಿಕ್ಕೋಸ್ಕರ ಮಸ್‌ಜಿದ್ ನಿರ್ಮಾಣವಾಗಬೇಕು.

ಅಲ್ಲಾಹನ ಅನುಗ್ರಹಗಳನ್ನು ಕಂಡು ನಾವು ಕೃತಜ್ಞತೆಯಿಂದ ಭರಿತರಾಗಿದ್ದೇವೆ. ಇಲ್ಲಿರುವವರು ಸಹ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವುದನ್ನು ವರ್ಧಿಸಲು ಪ್ರಯತ್ನಿಸಬೇಕು. ಅಲ್ಲಾಹನು ಅವರಿಗೆ ಒಂದು ಮಸ್‌ಜಿದ್ ದಯಪಾಲಿಸಿರುವನು. ಅಲ್ಲಾಹನ ಭವನವಾಗಿರುವ ಮಸ್‌ಜಿದನ್ನು ಅವರಿಗೆ ನೀಡಿರುವನು. ಅದು ಏಕದೇವನ ಆರಾಧನೆಗೋಸ್ಕರವಾಗಿದೆ. ಈ ಭವನ ಅಲ್ಲಾಹನದಾದರೂ ಅವನು ಅದನ್ನು ತನ್ನ ಲಾಭಕ್ಕೋಸ್ಕರ ನಿರ್ಮಿಸಿಲ್ಲ. ಇದರಲ್ಲಿ ಪ್ರವೇಶಿಸುವವರಿಗೆ ಅದರ ಲಾಭ ಉಂಟಾಗುತ್ತದೆ. ಅಲ್ಲಾಹನು ನಮಗೆ ಬಹಳ ದೊಡ್ಡ ಔದಾರ್ಯ ತೋರಿಸಿದ್ದಾನೆ. ಅದರ ಬಗ್ಗೆ ನಾವು ಎಷ್ಟು ಕೃತಜ್ಞತೆ ಅರ್ಪಿಸಿದರೂ ಕಡಿಮೆಯೇ ಆಗಿದೆ. ಮಸ್‌ಜಿದ್ ನಿರ್ಮಾಣದ ಬಗ್ಗೆ ಕೃತಜ್ಞತೆ ಅರ್ಪಿಸುವ ರೀತಿಯನ್ನು ಅಲ್ಲಾಹನು ನಾನು ತಿಲಾವತ್ ಮಾಡಿದ ಪವಿತ್ರ ಖುರ್‌ಆನ್ ವಚನದಲ್ಲಿ ಕಲಿಸಿದ್ದಾನೆ. ಅದೇನೆಂದರೆ, ಯಾರು ಅಲ್ಲಾಹನನ್ನು ಮತ್ತು ಅಂತಿಮ ವಿಚಾರಣೆಯ ದಿನವನ್ನು ನಂಬುತ್ತಾರೋ ನಮಾಝನ್ನು ನೆಲೆಗೊಳಿಸುತ್ತಾರೋ ಝಕಾತ್ ಕೊಡುತ್ತಾರೋ ಅವರೇ ಅಲ್ಲಾಹನ ಮಸ್‌ಜಿದ್‌ಗಳನ್ನು ಜನನಿಬಿಡವಾಗಿ ಮಾಡುವವರಾಗಿದ್ದಾರೆ. ಅವರು ಅಲ್ಲಾಹನ ಹೊರತು ಬೇರೆ ಯಾರನ್ನೂ ಭಯಪಡಬಾರದು. ಈ ಜನರು ಮಾರ್ಗದರ್ಶನ ಪಡೆದವರಲ್ಲಿ ಸೇರುವವರಾಗುವರು.

ಅಲ್ಲಾಹನನ್ನು ಮತ್ತು ಅಂತಿಮ ವಿಚಾರಣೆಯ ದಿನವನ್ನು ನಂಬುವುದು ಸತ್ಯವಿಶ್ವಾಸಿಯಾಗಲು, ಮುಸ್ಲಿಮನಾಗಲು ಮೂಲಭೂತ ಶರತ್ತಾಗಿದೆ. ಅನಂತರ ಅಲ್ಲಾಹನು ಹೇಳುತ್ತಾನೆ, ನಮಾಝನ್ನು ನೆಲೆಗೊಳಿಸುವುದು ಆವಶ್ಯಕವೆಂದು. ನಮಾಝ್ ನೆಲೆಗೊಳಿಸುವುದು ಹೇಗೆ? ಐದು ಹೊತ್ತಿನ ನಮಾಝನ್ನು ಬಾಜಮಾಅತ್ ಅನುಷ್ಠಿಸಲು ಮಸ್‌ಜಿದ್‌ಗೆ ಬರಬೇಕು. ನಮಾಝ್ ನೆಲೆಗೊಳಿಸುವುದರ ಅರ್ಥ ಬಾನಮಾಝ್

ಅನುಷ್ಠಿಸುವುದಾಗಿದೆ. ಅನಂತರ ಝುಕಾತ್ ಕೊಡಬೇಕು ಎಂದು ಹೇಳಲಾಗಿದೆ. ಝುಕಾತ್ ಎಂದರೆ ಏನು? ತಮ್ಮ ಸಂಪತ್ತನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿ ಅದನ್ನು ಪರಿಶುದ್ಧಗೊಳಿಸುವುದೇ ಝುಕಾತ್ ಆಗಿದೆ. ಅಲ್ಲಾಹನ ಅನುಗ್ರಹದಿಂದ ಅಹ್ಮದಿಯರು ಈ ಬಲಿದಾನ ಮಾಡುವುದರಲ್ಲಿ ಮುಂದೆ ಇದ್ದಾರೆ. ಆದರೆ ಬಾಜಮಾಅತ್ ನಮಾಝ್ ಅನುಷ್ಠಿಸುವ ಬಗ್ಗೆ ಪ್ರತಿಯೊಂದು ಸ್ಥಳದಲ್ಲಿ ಉದಾಸೀನತೆ ಕಂಡು ಬರುತ್ತದೆ. ಇದು ಮೂಲಭೂತ ಶರತ್ತುಗಳಲ್ಲಿ ಸೇರಿದ ಕಾರಣ ಅದರ ಬಗ್ಗೆ ಲಕ್ಷ್ಯ ನೀಡಬೇಕಾದ ಆವಶ್ಯಕತೆಯಿದೆ.

ಝುಕಾತ್ ಬಗ್ಗೆ ಹೇಳುವುದಾದರೆ, ಸಂಪತ್ತನ್ನು ಹೊಂದಿದವರ ಮೇಲೆ ಇದು ಕಡ್ಡಾಯವಾಗಿದೆ. ಬ್ಯಾಂಕ್‌ಗಳಲ್ಲಿ ಹಣವಿರುವವರು, ಸ್ವಂತ ಕೈಯ್ಯಲ್ಲಿ ಹಣವಿರುವವರು, ದೊಡ್ಡ ಸಂಖ್ಯೆಯ ಹಣ ಇಡೀ ವರ್ಷ ಹೊಂದಿರುವವರು, ಚಿನ್ನ, ಬೆಳ್ಳಿ ಹೊಂದಿರುವವರು ಝುಕಾತ್ ಕೊಡಬೇಕು. ಅದೇ ರೀತಿ ದೊಡ್ಡ ದೊಡ್ಡ ಡೈರಿ ಫಾರ್ಮ್ ಹೊಂದಿದವರೂ ಝುಕಾತ್ ಕೊಡಬೇಕು. ಅದರಲ್ಲಿ ಪುರುಷ ಮತ್ತು ಮಹಿಳೆ ಎಂಬ ಬೇಧವಿಲ್ಲ. ಝುಕಾತ್‌ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲದಿಂದ ನಿಗದಿಯಾದ ಒಂದು ನಿಶ್ಚಿತ ದರವಿದೆ. ಝುಕಾತ್ ಬಗ್ಗೆ ಮಹಿಳೆಯರು ಸಹ ಗಮನ ಹರಿಸಬೇಕೆಂದು ನಾನು ಹೇಳಲು ಬಯಸುತ್ತೇನೆ. ಇಲ್ಲಿಗೆ ಆಗಮಿಸಿ ಅವರ ಸಾಂಪತ್ತಿಕ ಸ್ಥಿತಿ ಸುಧಾರಣೆಯಾಗಿದೆ. ಅವರು ಭಾರವಾದ ಚಿನ್ನದ ಸರಗಳನ್ನೂ ಬಳೆಗಳನ್ನೂ ಧರಿಸುತ್ತಿರುವುದನ್ನು ನಾನು ಕಂಡಿದ್ದೇನೆ. ಸೌಂದರ್ಯಕ್ಕಾಗಿ ಹಾಗೆ ಧರಿಸುವುದನ್ನು ಅಲ್ಲಾಹನು ಅನುಮತಿಸಿದ್ದಾನೆ. ಆದರೆ ಅವುಗಳ ಮೇಲೆ ಝುಕಾತ್ ನೀಡುವುದು ಕಡ್ಡಾಯವಾಗಿದೆ.

ಜಮಾಅತಿನ ಹುದ್ದೇದಾರರ ಮತ್ತು ಅಧೀನ ಸಂಘಟನೆಗಳ ಹುದ್ದೇದಾರರ ಕಡ್ಡಾಯ ಕರ್ತವ್ಯವೇನೆಂದರೆ ಅವರು ಮಸ್‌ಜಿದ್‌ನಲ್ಲಿ ಹಾಜರಾಗಿ ಅದನ್ನು ಜನ ನಿಬಿಡಗೊಳಿಸಲು ಪ್ರಯತ್ನಿಸಬೇಕು. ಜಮಾಅತ್ ಬಲಿದಾನ ಮಾಡಿದ ಸಂಪತ್ತು ಮತ್ತು ಸಮಯದ ನಿಜವಾದ ಅನುಗ್ರಹಗಳನ್ನು ಗಳಿಸಲಿಕ್ಕಾಗಿ ಹುದ್ದೇದಾರರೂ ಪ್ರತಿಯೊಬ್ಬ ಅಹ್ಮದಿಯೂ ಪ್ರಯತ್ನಿಸಬೇಕಾದುದೇನೆಂದರೆ, ಈಗ ಈ ಮಸ್‌ಜಿದ್ ನಿಮ್ಮ ಜನಸಂಖ್ಯೆಗಿಂತ ಮೂರು ಪಟ್ಟು ಸ್ಥಳವಕಾಶ ಹೊಂದಿದ್ದರೂ ನೀವು ಬೇಗನೇ ಇದನ್ನು ಸ್ಥಳವಕಾಶ ಕಡಿಮೆಯಾಗುವಂತೆ ಮಾಡಬೇಕು. ನಮಾಝ್ ಅನುಷ್ಠಿಸುವವರ ಸಂಖ್ಯೆ ವರ್ಧಿಸುವಾಗ ಮಸ್‌ಜಿದ್ ಚಿಕ್ಕದಾಗುತ್ತದೆ. ಜಮಾಅತಿನ ಜನರ ಸಂಖ್ಯೆ ವರ್ಧಿಸುವಾಗ ಅದು ಚಿಕ್ಕದಾಗುತ್ತದೆ. ಜಮಾಅತಿನ ಜನರ ಸಂಖ್ಯೆ ವರ್ಧಿಸಲು ತಬ್ಲೀಗ್ ಮಾಡಬೇಕಾದ ಆವಶ್ಯಕತೆಯಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಮ್ಮ ಜಮಾಅತಿನ ಜನರು ಮಾದರಿಯಾಗಿ ತಮ್ಮನ್ನು ತೋರಿಸಬೇಕು. ನಮ್ಮ ಜಮಾಅತ್‌ನಲ್ಲಿ ಸೇರಿಕೊಂಡು ಕೆಟ್ಟ ಉದಾಹರಣೆ ತೋರಿಸುವವನು, ಕರ್ಮ ಅಥವಾ ವಿಶ್ವಾಸಕ್ಕೆ ಸಂಬಂಧಿಸಿ ಬಲಹೀನತೆ ತೋರಿಸುವವನು, ದೌರ್ಜನ್ಯಗಾರನಾಗಿದ್ದಾನೆ. ಏಕೆಂದರೆ ಅವನು ಇಡೀ ಜಮಾಅತನ್ನು ಅಪಕೀರ್ತಿಗೆ ಗುರಿಪಡಿಸುತ್ತಾನೆ. ನಮ್ಮನ್ನು ಸಹ ಆಕ್ಷೇಪಕ್ಕೆ ಗುರಿಪಡಿಸುತ್ತಾನೆ. ಕೆಟ್ಟ ಉದಾಹರಣೆಯ ಕಾರಣ ಅನ್ಯರಿಗೆ ಜಿಗುಪ್ಸೆ ಉಂಟಾಗುತ್ತದೆ. ಒಳ್ಳೆಯ ಉದಾಹರಣೆಯಿಂದ ಜನರು ಆಕರ್ಷಿತರಾಗುತ್ತಾರೆ. ಕೆಲವರು ನನಗೆ ಬರೆಯುತ್ತಾರೆ: ಇಷ್ಟರ ತನಕ ನಾನು ನಿಮ್ಮ ಜಮಾಅತಿಗೆ ಸೇರಿಲ್ಲವಾದರೂ ನಿಮ್ಮ ಜಮಾಅತಿನ ಕೆಲವು ಜನರ ಸ್ಥಿತಿಯಿಂದ, ಖಂಡಿತವಾಗಿಯೂ ಈ ಜಮಾಅತಿನ ಉಪದೇಶಗಳು ಒಳ್ಳೆಯದಾಗಿದೆ ಎಂದು ನಾನು ಅಂದಾಜು ಮಾಡುತ್ತೇನೆ.

ಈಗ ಲೋಕವನ್ನು ನಾಶದಿಂದ ರಕ್ಷಿಸುವುದು ಅಹ್ಮದಿಯರ ಕೆಲಸವಾಗಿದೆ. ಅದಕ್ಕಿರುವ ಶರತ್ತೇನೆಂದರೆ ನಾವು ಹೆಜ್ಜೆ ಮುಂದಕ್ಕೆ ಹಾಕಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಒಬ್ಬನಿಗೋಸ್ಕರ ಸಹ ಲಕ್ಷಾಂತರ ಜೀವಗಳು ರಕ್ಷಿಸಲ್ಪಡುತ್ತವೆ. ಆದುದರಿಂದ ಪ್ರತಿಯೊಬ್ಬ ಅಹ್ಮದಿಯ ಬಹಳ ದೊಡ್ಡ ಹೊಣೆಗಾರಿಕೆ ಏನೆಂದರೆ ಲೋಕವನ್ನು ರಕ್ಷಿಸಬೇಕು. ಲೋಕವು ಅಲ್ಲಾಹನನ್ನು ಮರೆತುಬಿಟ್ಟಿದೆ. ಅದರಿಂದ ಲೋಕವನ್ನು ರಕ್ಷಿಸುವುದು ನಮ್ಮ ಕಡ್ಡಾಯ ಕರ್ತವ್ಯವಾಗಿದೆ.

ಕೆಲವರ ಸ್ವಭಾವ ಗುಣಗಳು ಉತ್ತಮವಾಗಿವೆ. ನಾವು ಧರ್ಮವನ್ನು ಏಕೆ ನಂಬಬೇಕು. ನಮ್ಮ ಸ್ವಭಾವಗುಣಗಳು ಉತ್ತಮವಾಗಿವೆ ಎಂದು ಅವರು ಹೇಳುತ್ತಾರೆ. ಅವರ ಕೆಲವು ಸ್ವಭಾವಗುಣಗಳು ಉತ್ತಮವಾಗಿರಬಹುದು. ಕೆಲವರು ಯಾರ ಹಕ್ಕನ್ನೂ ಅಪಹರಿಸುವುದಿಲ್ಲ. ಆದರೆ ಈ ಜನರು ಬೇರೆ ಕೆಲವು ರೀತಿಗಳಲ್ಲಿ ಮತ್ತು ಸ್ವಾತಂತ್ರ್ಯದ ಹೆಸರಲ್ಲಿ, ನೈತಿಕ ಗುಣಗಳಲ್ಲಿ ದಿವಾಳಿಯಾಗಿದ್ದಾರೆ. ನಿಯಮಗಳು ಸಹ ಅವರಿಗೆ ಸಂರಕ್ಷಣೆ ನೀಡುತ್ತವೆ.

ಲೋಕವು ಅಲ್ಲಾಹನನ್ನು ಸಂಪೂರ್ಣವಾಗಿ ಮರೆತು ಬಿಟ್ಟಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿದ ನಾವು ಸಹ ನಮ್ಮ ಧಾರ್ಮಿಕ ಮೌಲ್ಯಗಳನ್ನು ಮರೆತುಬಿಟ್ಟು, ಅಲ್ಲಾಹನನ್ನು ಮರೆತುಬಿಟ್ಟು, ಇಸ್ಲಾಮೀ ನೈತಿಕ ಗುಣಗಳನ್ನು ಮರೆತುಬಿಟ್ಟು ಲೋಕವನ್ನು ಹಿಂಬಾಲಿಸಿ ಹೋದರೆ ಲೋಕದ ಸುಧಾರಣೆ ಮಾಡುವವರು ಬೇರೆ ಯಾರು?

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ನಿಸ್ಸಂಶಯವಾಗಿ ಅಲ್ಲಾಹನು ವಾಗ್ದಾನ ಮಾಡಿದ್ದಾನೆ– ಅವರೊಂದಿಗೆ ಜನರು ಸೇರುವರೆಂದು. ಆದರೆ ನಾವು ಅದರಿಂದ ವಂಚಿತರಾಗದಿರೋಣ. ಪ್ರತಿಯೊಬ್ಬ ಅಹ್ಮದಿಯ ಕಡ್ಡಾಯ ಕರ್ತವ್ಯವೇನೆಂದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ ಹಾಗೆ ತನ್ನನ್ನು ಪರಿಶೋಧಿಸಬೇಕು. ಆ ಮೂಲಕ ನಾವು ನಮ್ಮ ಹೊಣೆಗಾರಿಕೆಗಳನ್ನು ಸರಿಯಾಗಿ ಈಡೇರಿಸಬಹುದು. ಮಸ್‌ಜಿದ್ ನಿರ್ಮಿಸಿದೆವು ಎಂಬ ಮಾತಿನಲ್ಲಿ ಮಾತ್ರ ಸಂತೋಷಪಡಬೇಡಿರಿ. ನಮ್ಮ ಉದ್ದೇಶ ಲಕ್ಷ್ಯವೇನೆಂದರೆ

ಅಲ್ಲಾಹನ ಮುಂದೆ ಬಾಗುವವರ ಸಂಖ್ಯೆಯನ್ನು ಹೆಚ್ಚಿಸಬೇಕು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪತಾಕೆಯ ಕೆಳಗೆ ಜಮಾಯಿಸುವವರ ಸಂಖ್ಯೆಯನ್ನು ವರ್ಧಿಸಬೇಕು. ನಮ್ಮ ಪ್ರತಿಯೊಂದು ಹೆಜ್ಜೆ ಮುಂದೆ ಸಾಗುವಂತೆ ಆಗುವ ತನಕ ಇದು ಸಾಧ್ಯವಾಗದು. ನಮ್ಮಲ್ಲಿ ಪ್ರತಿಯೊಬ್ಬನು ತನ್ನವರಿಗೂ ಪರರಿಗೂ ಉದಾಹರಣೆ ಆಗಬೇಕು. ನಮ್ಮ ಪೈಕಿ ಯಾರೂ ಕಷ್ಟಕೊಡುವವನಾಗಬಾರದು. ತನ್ನವರ ಮತ್ತು ಅನ್ಯರ ಹಕ್ಕುಗಳನ್ನು ಕೊಡುವವರಾಗಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೀವು ನಿಮಗೋಸ್ಕರ, ನಿಮ್ಮ ಪತ್ನಿ ಮಕ್ಕಳಿಗೋಸ್ಕರ, ನಿಮ್ಮ ಸಂಬಂಧಿಕರಿಗೋಸ್ಕರ ಮತ್ತು ನಮಗೋಸ್ಕರ ಅನುಗ್ರಹದಾಯಕರಾಗಬೇಕು. ವಿರೋಧಿಗಳಿಗೆ ಆಕ್ಷೇಪ ಮಾಡಲು ನೀವು ಖಂಡಿತವಾಗಿಯೂ ಯಾವತ್ತೂ ಕಾರಣವಾಗಬೇಡಿರಿ. ಆದುದರಿಂದ ನಮ್ಮಲ್ಲಿ ಪ್ರತಿಯೊಬ್ಬನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಈ ನೋವನ್ನು ಮನವರಿಕೆ ಮಾಡಿಕೊಳ್ಳಬೇಕು. ಉತ್ತಮ ಉದಾಹರಣೆಯನ್ನು ತೋರಿಸಬೇಕು. ಅದು ಜಮಾಅತಿಗೆ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಒಳ್ಳೆಯ ಹೆಸರನ್ನು ತರುವವುಗಳಾಗಬೇಕು.

ಅಲ್ಲಾಹನು ನಮಗೆ ಈ ಭಾಗ್ಯ ದಯಪಾಲಿಸಲಿ. ನಮ್ಮ ನಾಳೆಯ ದಿನ ಇಂದಿನ ದಿನಕ್ಕಿಂತ ಉತ್ತಮವಾಗಿರಲಿ. ನಮ್ಮ ಮಕ್ಕಳು ಮತ್ತು ನಮ್ಮ ಪೀಳಿಗೆ ಈ ವಿಷಯವನ್ನು ಮನವರಿಕೆ ಮಾಡಿಕೊಳ್ಳುವವರಾಗಲಿ. ಅವರ ತಂದೆ ತಾಯಿ ಮಾಡಿದ ಬಲಿದಾನಗಳು, ಅವರು ನಿರ್ಮಿಸಿದ ಮಸ್ಜಿದ್, ಅವರು ಮಾಡಿದ ತಬ್ಲೀಗ್, ಮಕ್ಕಳನ್ನು ಧರ್ಮದಲ್ಲಿ ನೆಲೆಗೊಳ್ಳುವಂತೆ ನೀಡಿದ ಉಪದೇಶಗಳು, ಇವು ಅವರು ನಮಗೆ ಬಿಟ್ಟುಹೋದ ವಾಸ್ತವಿಕ ಸಂಪತ್ತಾಗಿದೆ ಎಂದು ಅವರು ಮನವರಿಕೆ ಮಾಡಿಕೊಳ್ಳಲಿ. ಮುಂದಿನ ಪೀಳಿಗೆ ಇದೇ ಭಾವನೆಯನ್ನು ಅದರ ನಂತರದ ಪೀಳಿಗೆಯಲ್ಲಿ ಹುಟ್ಟಿಸುತ್ತಾ ಹೋಗುವವರಾಗಲಿ. ಈ ಸರಪಳಿ ಹೀಗೆಯೇ ಮುಂದುವರಿಯುವ ಹಾಗೆ ಅಲ್ಲಾಹನು ಮಾಡಲಿ. ಅಲ್ಲಾಹನ ಅನುಗ್ರಹಗಳನ್ನು ನಮ್ಮ ಮುಂದಿನ ಪೀಳಿಗೆಗಳು ಸಹ ಗಳಿಸುವಂತಾಗಲಿ. ಅಲ್ಲಾಹನು ಹಾಗೆಯೇ ಮಾಡಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis** (atba)*

*At, Mahmood Mosque, Regina, Canada. U.S.A on 04-11-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon